ಆಟವಾಡುತ್ತಾ ಕಲಿಯುವುದು | ತರಗತಿಗಳಲ್ಲಿ ಆಡಿಸಬಹುದಾದ ಆಟಗಳು

– ಶೆಹನಾಜ್ ಡಿ.ಕೆ.

ಮಕ್ಕಳು ಆಡುವುದು ಮತ್ತು ಕಲಿಯುವುದು ಜೊತೆ ಜೊತೆಗೇ ಸಾಗುತ್ತಿರುತ್ತವೆ. ಆಡುತ್ತಲೇ ಕಲಿಯುವುದು ಶಾಲೆಗೆ ಹೋಗುವುದಕ್ಕೆ ಮೊದಲು ಮತ್ತು ಶಾಲೆಗೆ ಹೋಗುವುದು ಆರಂಭವಾದ ಮೇಲೂ ಮಕ್ಕಳು ಹೆಚ್ಚು ಹೆಚ್ಚು ಕಲಿಯುವುದು ಆಟದ ಸಮಯದಲ್ಲೇ. ಆದರೆ, ಒಂದು ನಿರ್ದಿಷ್ಟ ವಯಸ್ಸಾದ ಮೇಲೆ ಕಲಿಕೆ ಮುಂದುವರಿದರೂ ಆಟವಾಡುವುದು ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಶಾಲೆಯಲ್ಲಿಯೂ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ತರಗತಿಗಳ ತನಕ ಚಟುವಟಿಕೆ ಆಧಾರಿತ ಕಲಿಕೆ ಹೆಚ್ಚು ಪ್ರಚಲಿತದಲ್ಲಿರುತ್ತದೆ. ಆದರೆ ಅದಕ್ಕೂ ಮೇಲಿನ ತರಗತಿಗಳಲ್ಲಿ ಇವು ಇರುವುದೇ ಇಲ್ಲ.

ನಮಗೆಲ್ಲ ತಿಳಿದಿರುವಂತೆ ವಾತಾವರಣ ಒತ್ತಡ ರಹಿತವಾಗಿದ್ದಾಗ ಮತ್ತು ಶೈಕ್ಷಣಿಕವಾದ ಒತ್ತಡ ಇಲ್ಲದಿರುವಾಗ ಕಲಿಕೆ ಸುಲಭವಾಗುತ್ತದೆ. ಬೋಧನೆಯಲ್ಲಿ ನಾವು ಆಟದ ವಿಧಾನವನ್ನು ಬಳಸಿದರೆ ಮಕ್ಕಳು ಗಣಿತ ಮತ್ತು ಭಾಷಾ ಕೌಶಲಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಕಲಿತು ಕೊಳ್ಳುತ್ತಾರೆ.

ಗಣಿತದ ಕೆಲವು ಆಟಗಳು

ನನ್ನ ತರಗತಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ತರಗತಿಯ ಮಕ್ಕಳು ಆಡುವ ಕೆಲವು ಸಾಮಾನ್ಯ ಗಣಿತದ ಆಟಗಳನ್ನು ನಾನು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ಪ್ರಾಥಮಿಕ ತರಗತಿಗಳಲ್ಲಿ ಮಕ್ಕಳು ಈ ಆಟಗಳನ್ನು ಮೊದಲು ಬಾಯಿ ಮಾತಿನ ಮೂಲಕ ಆಡುತ್ತಾರೆ ನಂತರದ ತರಗತಿಗಳಲ್ಲಿ ಬರವಣಿಗೆ ಮೂಲಕ ಕೂಡುವುದು, ಕಳೆಯುವುದು ಮತ್ತು ಗುಣಾಕಾರ ಹಾಗೂ ಭಾಗಾಕಾರವನ್ನು ಇನ್ನೂ ಚೆನ್ನಾಗಿ ಮಾಡುವುದರಲ್ಲಿ ತೊಡಗುತ್ತಾರೆ.

ಲೆಕ್ಕದ ಆಟ

ಈ ಆಟದಲ್ಲಿ ಮೂರರಿಂದ ನಾಲ್ಕು ಮಕ್ಕಳು ಒಂದು ಗುಂಪಾಗಿ ಆಟವಾಡುತ್ತಾರೆ. ಅವರ ಬಳಿ ಮೂರು ದಾಳ (ಡೈಸ್)ಗಳಿರುತ್ತವೆ– ಎರಡು ದಾಳಗಳಲ್ಲಿ ಸಂಖ್ಯೆಗಳಿದ್ದು ಒಂದು ದಾಳದಲ್ಲಿ ಲೆಕ್ಕದ ಸಂಕೇತಗಳಿರುತ್ತವೆ (+, -, ×, ÷).. ಪ್ರತಿಯೊಂದು ಮಗುವೂ ತನ್ನಸರದಿ ಬಂದಾಗ ಮೂರೂ ದಾಳಗಳನ್ನು ಒಟ್ಟಿಗೆ ಉರುಳಿಸಿ ಪುಸ್ತಕದಲ್ಲಿ ಯಾವ ಸಂಕೇತ ಬಂದಿರುತ್ತದೋ ಅದರಂತೆ ಲೆಕ್ಕ ಮಾಡಿ ಅದನ್ನು ಗುಂಪಿಗೆ ಹೇಳುತ್ತದೆ ಹಾಗೂ ತನ್ನ ನೋಟ್ ಪುಸ್ತಕದಲ್ಲಿ ಉತ್ತರಗಳನ್ನು ಬರೆದುಕೊಳ್ಳುತ್ತದೆ. ಮಾಡಿದ ಲೆಕ್ಕ ಸರಿಯಾಗಿದ್ದರೆ (√) ಸರಿಚಿಹ್ನೆಯನ್ನು ಬರೆಯುತ್ತಾರೆ. ಆದರೆ ಅದೇನಾದರೂ ತಪ್ಪಾಗಿದ್ದರೆ(×) ತಪ್ಪು ಚಿಹ್ನೆಯನ್ನು ಬರೆದು ಗುಂಪಿನ ಸಹಾಯದೊಂದಿಗೆ ಸರಿಪಡಿಸಿ ನೋಟ್ ಪುಸ್ತಕದಲ್ಲಿ ಬರೆಯುತ್ತಾರೆ. ಇಲ್ಲಿ ಮಕ್ಕಳು ಒಂದು ನಿಯಮವನ್ನು ನೆನಪಿಟ್ಟುಕೊಳ್ಳಬೇಕು. ಸಂಕಲನ ಮತ್ತು ಗುಣಾಕಾರ ಮಾಡುವಾಗ ಅವರು ಯಾವುದೇ ಸಂಖ್ಯೆಯನ್ನು ಮೊದಲು ಬರೆಯಬಹುದು, ಆದರೆ ವ್ಯವಕಲನ ಮತ್ತು ಭಾಗಾಕಾರದ ಚಿಹ್ನೆಗಳು (-, ÷), ಬಂದರೆ ಅವರು ದೊಡ್ಡ ಸಂಖ್ಯೆಗಳನ್ನು ಮೊದಲು ಬರೆಯಬೇಕಾಗುತ್ತದೆ. ಕೆಲವೊಮ್ಮೆ ಮಕ್ಕಳಿಗೆ ಭಾಗಾಕಾರವನ್ನು ಮಾಡಲು ಸಾಧ್ಯವಾಗುವುದಿಲ್ಲ, ಆಗ ಅದನ್ನು ಶಿಕ್ಷಕರೊಂದಿಗೆ ಚರ್ಚೆಗೆ ಬಿಟ್ಟುಬಿಡಬಹುದು. ಆಟದ ಕೊನೆಯಲ್ಲಿ, ಒಂದು ದಿನದಲ್ಲಿ ಅವರು ಎಷ್ಟು ಬಾರಿ ದಾಳವನ್ನು ಉರುಳಿಸಿ ಬಿಟ್ಟಿದ್ದಾರೆ ಮತ್ತು ಯಾವ ಕ್ರಿಯೆಗಳನ್ನು ಅವರು ಮಾಡಿದರು, ಎಷ್ಟು ಬಾರಿ ಲೆಕ್ಕಾಚಾರವನ್ನು ಅವುಗಳನ್ನು ಅವರು ಪೂರ್ಣವಾಗಿ ಸರಿಯಾಗಿ ಮಾಡಿದ್ದಾರೆ ಎಂಬುದನ್ನು ಸ್ವಯಂ ಅವರೇ ಕಾಣುತ್ತಾರೆ. ಈ ಚಟುವಟಿಕೆಯಲ್ಲಿ ಮಕ್ಕಳು ಪರಸ್ಪರ ಒಬ್ಬರಿಗೊಬ್ಬರು ಸಹಾಯ ಮಾಡುವ ಮೂಲಕ ಕಲಿಯುತ್ತಾರೆ.

ಅಂಗಡಿ ವ್ಯಾಪಾರದ ಆಟ

ಈ ಅಂಗಡಿ ವ್ಯಾಪಾರದ ಆಟದಲ್ಲಿ ಮಕ್ಕಳು ಕೇವಲ ಖರೀದಿ ಮತ್ತು ಮಾರಾಟ ಮಾಡುವುದು ಮಾತ್ರವಲ್ಲದೆ ಅವರು ಬಿಲ್‌ಗಳನ್ನೂ ತಯಾರಿಸುತ್ತಾರೆ. ತಮ್ಮ ಆಸಕ್ತಿಗಳು ಏನೇ ಇರಲಿ ಎಲ್ಲ ಮಕ್ಕಳೂ ಅಂಗಡಿ ಮಾಲೀಕನ ಆಟವನ್ನು ಖುಷಿಯಿಂದ ಆಡುತ್ತಾರೆ. ಈ ಆಟದಲ್ಲಿ ಅವರಿಗೆ ಸಾಕಷ್ಟು ಕಲಿಕೆಯ ಅವಕಾಶಗಳಿರುತ್ತವೆ. ಕೆಲವು ಮಕ್ಕಳ ತಂದೆತಾಯಿಗಳು ವ್ಯಾಪಾರಿಗಳಾಗಿರುತ್ತಾರೆ (ಕಿರಾಣಿ ಅಂಗಡಿ, ತರಕಾರಿ ಅಂಗಡಿ ಇತ್ಯಾದಿ); ತಂದೆತಾಯಿಗಳ ಕೆಲಸದಲ್ಲಿ ಅವರು ಸಹಾಯ ಮಾಡಿದ ಅಭ್ಯಾಸ ಅವರಿಗಿರುತ್ತದೆ ಮತ್ತು ಸಾಮಗ್ರಿಗಳನ್ನು ಪಟ್ಟಿ ಮಾಡುವುದು ಮತ್ತು ಲೆಕ್ಕ ಹಾಕುವುದು ಹೇಗೆ ಎಂಬಿತ್ಯಾದಿ ಸಂಗತಿಗಳನ್ನು ಅವರು ಇತರರಿಗೆ ಕಲಿಸುತ್ತಾರೆ.

ಮಕ್ಕಳು ಈ ಆಟಕ್ಕೆ ತಾವೇ ತಯಾರಿ ಮಾಡಿಕೊಳ್ಳುತ್ತಾರೆ. ಅವರು ಆಟಿಕೆಗಳು ಮತ್ತು ಇತರ ಸಾಮಗ್ರಿಗಳನ್ನು ಮನೆಯಿಂದ ತಂದು ಮಾರಾಟ ಮಾಡುತ್ತಾರೆ. ಅವರು ಈ ಸರಕುಗಳಿಗೆ ಬೆಲೆಗಳನ್ನು ನಿರ್ಧಾರ ಮಾಡುತ್ತಾರೆ ಮತ್ತು ಮಾರಾಟ ಮಾಡಿದ ಸರಕುಗಳಿಗೆ ಬಿಲ್ಲುಗಳನ್ನು ಬರೆದು ನೀಡುತ್ತಾರೆ. ಹಿರಿಯ ವಿದ್ಯಾರ್ಥಿಗಳು ತಮ್ಮ ವಹಿವಾಟಿನಲ್ಲಿ ಉಂಟಾದ ಲಾಭ ಮತ್ತು ನಷ್ಟವನ್ನು ಕೂಡ ಲೆಕ್ಕ ಹಾಕುತ್ತಾರೆ. ಇದರಿಂದ ಮಕ್ಕಳು ಅರ್ಧ, ಮುಕ್ಕಾಲು, ಕಾಲು ಭಾಗ ಇತ್ಯಾದಿ ಲೆಕ್ಕಾಚಾರವನ್ನು ಕೂಡ ಕಲಿಯುತ್ತಾರೆ.

ಈ ಆಟವನ್ನು ಒಂದರಿಂದ ಎಂಟನೇ ತರಗತಿಗಳವರೆಗೆ ಎಲ್ಲ ಹಂತಗಳಲ್ಲಿ ವಿವಿಧ ರೀತಿಯಲ್ಲಿ ಆಡಲಾಗುತ್ತದೆ. ಒಮ್ಮೆ ಎಂಟನೇ ತರಗತಿಯಲ್ಲಿ, ಮಕ್ಕಳು 'ಬಟ್ಟೆ ಮಾರಾಟ' ಅಥವಾ ಬಟ್ಟೆಯ ಮೇಲೆ ರಿಯಾಯಿತಿ ವ್ಯಾಪಾರವನ್ನು ಏರ್ಪಡಿಸಿ ಆನಂದಿಸಿದರು. ಅವರು ಬಟ್ಟೆಗಳ ಛಾಯಾಚಿತ್ರಗಳನ್ನು ಹೊಂದಿದ್ದರು ಮತ್ತು ಅವುಗಳ ಮೇಲೆ ಮೂಲಬೆಲೆ ಮತ್ತು ಶೇಕಡಾ 10 ಮತ್ತು 15 ರಷ್ಟು ರಿಯಾಯಿತಿ ದರ ಪ್ರದರ್ಶಿಸುವ ಸ್ಟಿಕ್ಕರ್‌ಗಳನ್ನು ಹಾಕಿದ್ದರು. ಈ ಚಟುವಟಿಕೆಯು ಲಾಭ ಮತ್ತು ನಷ್ಟ, ರಿಯಾಯಿತಿ ಹಾಗು ಶೇಕಡಾವಾರು ಲೆಕ್ಕಗಳನ್ನು ಪರಿಹರಿಸುವಲ್ಲಿ ತಾವು ಮಾಡುತ್ತಿದ್ದ ಬಹಳಷ್ಟು ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಅವರಿಗೆ ಸಹಾಯ ಮಾಡಿತು.

ಅಳತೆಯ ಆಟ


ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಮಕ್ಕಳು ಅಳತೆಗಳನ್ನು ಕಲಿಯಲು ಕೆಲವು ವಿಶೇಷ ಆಟಗಳನ್ನು ಆಡುತ್ತಾರೆ. ನೆಲದ ಮೇಲೆ ಉದ್ದನೆಯ ಗೆರೆಗಳನ್ನು ಎಳೆದು ಅವುಗಳನ್ನು ಅಳತೆಗೋಲಿನಿಂದ ಅಳೆದು ತಾವು ಕಂಡ ಅಳತೆಯನ್ನು ಬರೆದಿಟ್ಟುಕೊಳ್ಳುತ್ತಾರೆ. ಅವರು ಒಬ್ಬರ ನಂತರ ಒಬ್ಬರು ಸರದಿ ಮೇಲೆ ಉದ್ದ ಜಿಗಿತವನ್ನು (long jump) ನೆಗೆದು ಎಷ್ಟು ಉದ್ದಕ್ಕೆ ಜಿಗಿದಿದ್ದೇನೆ ಎಂಬುದನ್ನು ಮೀಟರ್ ಮತ್ತು ಸೆಂಟಿಮೀಟರ್‌ಗಳಲ್ಲಿ ಅಳೆಯುತ್ತಾರೆ. ಅವರು ಕ್ರಮೇಣ ತಮ್ಮ ಜಿಗಿತದ ಉದ್ದವನ್ನು ಹೆಚ್ಚಿಸಲು ಪ್ರಯತ್ನಿಸುತ್ತಾರೆ.


ಚಿಕ್ಕ ಮಕ್ಕಳಿಗೆ ಉದ್ದ ಜಿಗಿತದಾಟ ಬಹಳ ಇಷ್ಟ. ಸಾಮಾನ್ಯವಾಗಿ ಅವರು ತಮ್ಮ ಜಿಗಿತದ ಅಂತರವನ್ನು ಗುರುತು ಹಾಕಿಕೊಂಡು ಯಾರು ಅತಿದೂರಕ್ಕೆ ಜಿಗಿದಿದ್ದಾರೆ ಎಂಬುದನ್ನು ಕಂಡುಕೊಳ್ಳುತ್ತಾರೆ. ಆದರೆ ಅವರು ಅಳೆಯುವುದನ್ನು ಕಲಿಯುವಾಗ, ನೆಲದ ಮೇಲೆ ಸಂಖ್ಯಾರೇಖೆಯನ್ನು ಬರೆದು ಅಲ್ಲಿ 0, 10, 20, 30 ಎಂದು ಸೆಂಟಿಮೀಟರ್‌ಗಳಲ್ಲಿ ಅಳತೆಗಳನ್ನು ಗುರುತು ಹಾಕಿಕೊಳ್ಳುತ್ತಾರೆ. ಎಲ್ಲಿಂದ ಜಿಗಿತವನ್ನು ಆರಂಭಿಸಿದ್ದಾರೋ ಅಲ್ಲಿಂದ (ಸೊನ್ನೆ '0' ಸೆ.ಮೀ.ನಿಂದ) ಅವರ ಗುರುತು ಆರಂಭವಾಗುತ್ತದೆ ಮತ್ತು ಜಿಗಿತದ ಒಟ್ಟು ಅಂತರವನ್ನು ಸೆಂಟಿಮೀಟರ್‌ಗಳಲ್ಲಿ ಬರೆಯುತ್ತಾರೆ. ಅವರು 100 ಸೆ.ಮೀ.ಗೆ ಒಂದು ಮೀಟರ್ ಎಂದು ಬರೆಯುತ್ತಾರೆ ಮತ್ತು ಯಾರಾದರೂ 115 ಸೆ.ಮೀ. ದೂರ ಜಿಗಿದರೆ ಅವರು ಒಂದು ಮೀಟರ್ ಮೇಲೆ 15 ಸೆ.ಮೀ. ದೂರಕ್ಕೆ ಜಿಗಿದಿದ್ದಾರೆ ಎಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಾರೆ.


ಆಕಾರಗಳು ಮತ್ತು ಪರಿಧಿ (ಸುತ್ತಳತೆ)

ಈ ಆಟದಲ್ಲಿ ಮಕ್ಕಳು ಸುತ್ತಳತೆ ಎಂದರೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಲು ಮನೆಯಿಂದಲೇ ಮೂರು ಅಥವಾ ನಾಲ್ಕು ಸಮಾನ ಉದ್ದದ (12 ಅಥವಾ 18 ಸೆ.ಮೀ.) ದಾರಗಳನ್ನು ತರುತ್ತಾರೆ. ತರಗತಿಯಲ್ಲಿ ಗುಂಪಿನಲ್ಲಿ ಕುಳಿತುಕೊಂಡು ತಮ್ಮ ನೋಟ್–ಪುಸ್ತಕಗಳಲ್ಲಿ ನಾನಾ ರೀತಿಯ ಆಕಾರಗಳನ್ನು (ಚೌಕ, ತ್ರಿಕೋನ ಮತ್ತು ಆಯತಾಕಾರ) ರಚಿಸುತ್ತಾರೆ. ಆ ಬಳಿಕ ಅವರು ಯಾವುದು ದೊಡ್ಡದಾಗಿ ಕಾಣುತ್ತದೆ ಎಂಬ ಬಗ್ಗೆ ಚರ್ಚೆ ಮಾಡುತ್ತಾರೆ. ಆದರೆ ಎಲ್ಲ ಚಿತ್ರಗಳ ಹೊರಮೈಯ ಅಳತೆಯು ಒಂದೇ ಆಗಿರುತ್ತದೆ ಎಂಬುದನ್ನು ಕಂಡುಕೊಳ್ಳುತ್ತಾರೆ. ಏಕೆಂದರೆ ಸಮಾನ (ಉದ್ದದ) ಅಳತೆಯ ದಾರಗಳಿಂದಲೇ ಅವರು ನಾನಾ ಆಕಾರಗಳನ್ನು ರಚಿಸಿರುತ್ತಾರೆ. ಅದೇ ರೀತಿ ಆಕಾರಗಳನ್ನು ಕಡ್ಡಿಗಳನ್ನು ಬಳಸಿ ರಚಿಸುತ್ತಾರೆ. ಪ್ರತಿಯೊಂದು ಬದಿಯಲ್ಲಿ ಮೂರು ಕಡ್ಡಿಗಳೊಂದಿಗೆ ಚೌಕ, ನಾಲ್ಕು ಕಡ್ಡಿ ಬಳಸಿ ತ್ರಿಕೋನ ಹಾಗು ನಾಲ್ಕು ಮತ್ತು ಪ್ರತಿ ಬದಿಯಲ್ಲಿ ಎರಡು ಕಡ್ಡಿಗಳನ್ನು ಬಳಸಿ ಆಯತಾಕಾರಗಳನ್ನು ರಚಿಸುತ್ತಾರೆ. ಪ್ರತಿಯೊಂದು ಚಿತ್ರವನ್ನೂ 12 ಕಡ್ಡಿಗಳೊಂದಿಗೆ ಮಾಡಿದಾಗ ಎಲ್ಲದರ ಹೊರಮೈಯ ಅಳತೆಯೂ ಒಂದೇ ಆಗಿರುತ್ತದೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ.









ಮೌಖಿಕ ಲೆಕ್ಕ (ಮನಸಲ್ಲೇ ಲೆಕ್ಕ ಮಾಡಿ ಹೇಳುವುದು)

ಮೌಖಿಕ ಅಭ್ಯಾಸಗಳನ್ನು ಮಾಡಲು ತರಗತಿಯನ್ನು ಎರಡು ಗುಂಪುಗಳಾಗಿ ಮಾಡಬೇಕು. ಮನಸ್ಸಿನಲ್ಲೇ ಲೆಕ್ಕಾಚಾರಗಳನ್ನು ಮಾಡುವ ಮೂಲಕ ಉತ್ತರಗಳನ್ನು ನೀಡುವಂತೆ 'ಎ' ಗುಂಪು 'ಬಿ' ಗುಂಪನ್ನು ಕೇಳಬೇಕು. ಮಕ್ಕಳು (7 ಮತ್ತು 8ನೇ ತರಗತಿ) ತಾವೇ ಈ ರೀತಿಯ ಪ್ರಶ್ನೆಗಳನ್ನು ರೂಪಿಸಿಕೊಳ್ಳಬೇಕು;

1. 700ರ ಅರ್ಧ ಭಾಗ ಎಂದರೆ ಎಷ್ಟು?
2. ಎರಡು 500 ರೂ ನೋಟುಗಳು ಮತ್ತು 100 ರೂ.ನ ನಾಲ್ಕು ನೋಟುಗಳು ಸೇರಿದರೆ ಒಟ್ಟು ಮೊತ್ತ ಎಷ್ಟು?
3. 280ಕ್ಕೆ 70ನ್ನು ಸೇರಿಸಿದರೆ ಒಟ್ಟು ಎಷ್ಟು ಆಗುತ್ತದೆ?

ಮಕ್ಕಳು ತಮ್ಮ ಅಣ್ಣ ಅಕ್ಕಂದಿರ ಸಹಾಯ ಪಡೆದುಕೊಂಡು ಪ್ರಶ್ನೆಗಳನ್ನು ಬರೆದುಕೊಂಡು ಬಂದು ತರಗತಿಯಲ್ಲಿ ಕೇಳುತ್ತಾರೆ. ಇಂತಹ ಅಭ್ಯಾಸವನ್ನು ಕಳೆದ ಎರಡು ಮೂರು ವರ್ಷಗಳಿಂದ ಮಾಡುತ್ತ ಬಂದಿರುವ ಕೆಲವು ಮಕ್ಕಳು ಈ ರೀತಿ ಪದಗಳ ಸಮಸ್ಯೆಗಳನ್ನು ರಚಿಸಿ ಕೇಳಲು ಆರಂಭಿಸುತ್ತಾರೆ:

1. ಒಂದು ಪೆನ್ನಿನ ಬೆಲೆ 12 ರೂ. ಆಗಿದ್ದರೆ ಅಂತಹ 12 ಪೆನ್ನುಗಳ ಬೆಲೆ ಎಷ್ಟು?
2. ನಾನು ನನ್ನ ತಾಯಿಯೊಂದಿಗೆ ಮಾರುಕಟ್ಟೆಗೆ ಹೋಗಿದ್ದೆ. ಅಲ್ಲಿ 20 ರೂ.ಗೆ ಒಂದು ಕೆ.ಜಿ. ಆಲೂಗಡ್ಡೆ ದೊರೆಯುತ್ತಿತ್ತು. ನನ್ನ ತಾಯಿ ಒಂದೂವರೆ ಕೆಜಿ ಆಲೂಗಡ್ಡೆಯನ್ನು ಖರೀದಿ ಮಾಡಿದರೆ ಆಕೆ ಎಷ್ಟು ಹಣವನ್ನು ಪಾವತಿ ಮಾಡಿರುತ್ತಾಳೆ?

ಇದೇ ರೀತಿಯಲ್ಲಿ ಮಕ್ಕಳು ಪ್ರಶ್ನೆಗಳನ್ನು ರೂಪಿಸಲು ಪ್ರಯತ್ನಿಸಿ ಅವುಗಳನ್ನು ಮೌಖಿಕವಾಗಿ ಪರಿಹರಿಸುತ್ತಾರೆ. ಇದು ಯೋಚಿಸಿ ಲೆಕ್ಕ ಮಾಡಲು ಅವರಿಗೆ ಸಹಾಯ ಮಾಡುತ್ತದೆ. ಆದರೆ ಈ ಚಟುವಟಿಕೆಯಲ್ಲಿ ಇಡೀ ಗುಂಪು ಸಕ್ರಿಯವಾಗಿರುವುದಿಲ್ಲ. ಬಹಳ ಮಾತನಾಡುವ, ಕ್ಷಿಪ್ರವಾಗಿ ಪ್ರಶ್ನೆಗಳನ್ನು ಕೇಳುವ ಮತ್ತು ಅದಕ್ಕೆ ಉತ್ತರಗಳನ್ನು ನೀಡುವ ಮಕ್ಕಳು ಮಾತ್ರ ಅವಕಾಶಗಳನ್ನು ಪಡೆಯುತ್ತಾರೆ. ಮೌನವಾಗಿರುವ ಮಕ್ಕಳಿಗೆ ಅವಕಾಶ ಸಿಗುವುದಿಲ್ಲ.

ಕೆಲವು ಭಾಷಾ ಕಲಿಕೆ ಆಟಗಳು:

ಓದುವ ಖುಷಿ

ಮಕ್ಕಳಿಗೆ ತಾವು ಓದಲು ಬಯಸುವ ಪುಸ್ತಕ ಸಿಗದೇ ಇದ್ದಾಗ ಅಥವಾ ಗ್ರಂಥಾಲಯದ ವೇಳೆಯಲ್ಲಿ ಆಟವಾಡಲು ಬಯಸಿದಾಗ ಅವರು ಓದಿಗೆ ಸಂಬಂಧಿಸಿದ ಆಟಗಳನ್ನು ಆಡುವ ಆಯ್ಕೆ ಇದೆ. ಒಬ್ಬಾತ ಪುಸ್ತಕವನ್ನು ಓದುತ್ತಾನೆ, ಓದುವಾಗ ಕೆಲವು ಪದಗಳನ್ನು ಬಿಟ್ಟು ಬಿಡುತ್ತಾನೆ. ಇತರರು ಈ ಪದಗಳು ಯಾವುವೆಂದು ಊಹಿಸಿ ಒದಗಿಸಬೇಕು.

ಇನ್ನೊಂದು ಆಟದಲ್ಲಿ ಪ್ರತಿ ಗುಂಪಿಗೂ ಒಂದು ಅಕ್ಷರವನ್ನು ಅಥವಾ ಒಂದು ಪದವನ್ನು ನೀಡಲಾಗುತ್ತದೆ. ಇದನ್ನು ಬಳಸಿಕೊಂಡು ಮಕ್ಕಳು ಹೊಸ ಪದಗಳನ್ನು ಕಟ್ಟಬೇಕು. ಅತಿ ಹೆಚ್ಚು ಪದಗಳನ್ನು ರಚಿಸುವ ಗುಂಪು ಗೆಲ್ಲುತ್ತದೆ.

ಪತ್ರಗಳನ್ನು ಬರೆಯುವುದು

ಮಕ್ಕಳು ತಮ್ಮ ಗೆಳೆಯರಿಗೆ ಪತ್ರಗಳನ್ನು ಬರೆಯುತ್ತಾರೆ. ಅವರು ಅನೇಕ ವಿಚಾರಗಳನ್ನು ನಾನಾ ರೀತಿಯಲ್ಲಿ ಬರೆಯುತ್ತಾರೆ. ಆ ಮೂಲಕ ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಅವರು ತಾವು ಬಯಸುವ, ತಯಾರಿಸುವ ಅಥವಾ ತಿನ್ನಲು ಬಯಸುವ ಆಹಾರದ ಬಗ್ಗೆ ಬರೆಯುತ್ತಾರೆ. ಅದೇ ರೀತಿ ಅವರು ತಮ್ಮ ಮನೆಗಳಲ್ಲಿ ನಡೆಯುವ ಒಳ್ಳೆಯ ಹಾಗೂ ಕೆಟ್ಟ ಸಂಗತಿಗಳ ಬಗ್ಗೆಯೂ ಬರೆಯುತ್ತಾರೆ. ಅಥವಾ ಒಂದು ಹಬ್ಬವನ್ನು ಹೇಗೆ ಆಚರಿಸಲು ಯೋಜಿಸಿದ್ದೇವೆ ಎಂಬುದರ ಬಗ್ಗೆ ಬರೆಯುತ್ತಾರೆ.

ಅದೇ ರೀತಿ ಅವರು ಮೌಖಿಕ ಅಭಿವ್ಯಕ್ತಿಗಾಗಿ ತಮ್ಮದೇ ಆದ ರೀತಿಯಲ್ಲಿ ಆಟಗಳನ್ನು ಸೃಷ್ಟಿಸಬಹುದು. ಅವರು ಪರಸ್ಪರ ಒಬ್ಬರಿಗೊಬ್ಬರು ವಿಷಯವೊಂದನ್ನು ನೀಡಿ ಆ ಬಗ್ಗೆ ಎರಡು ನಿಮಿಷ ಮಾತನಾಡುತ್ತಾರೆ.

ಅಂತಿಮ ಮಾತು:

ಶಾಲೆಯಿಂದ ಹೊರಗಡೆಯೂ ಹೆಣ್ಣಿರಲಿ, ಗಂಡಿರಲಿ ಮಕ್ಕಳು ಸೈಕಲ್ ಓಡಿಸುವುದನ್ನು ಎಷ್ಟು ಇಷ್ಟಪಡುತ್ತಾರೆ ಎಂಬುದನ್ನು ನಾವು ಕಾಣಬಹುದು. ಸೈಕಲ್ ಓಡಿಸುತ್ತಲೇ ಅನೇಕ ಸಂಗತಿಗಳನ್ನು ಅವರು ಕಲಿಯುತ್ತಾರೆ ಮತ್ತು ಅದರಿಂದ ಅವರಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ಏಕಾಏಕಿ ಕಳಚಿ ಹೋದ ಸೈಕಲ್ಲಿನ ಚೈನ್ ಜೋಡಿಸುವುದು ಹೇಗೆ, ಬ್ರೇಕ್ ಸರಿಯಾಗಿದೆಯೇ ಇಲ್ಲವೇ ಪರೀಕ್ಷಿಸುವುದು, ಚಕ್ರದ ಗಾಳಿಯ ಒತ್ತಡ ಸಾಕೇ ಎಂದು ಪರಿಶೀಲಿಸುವುದು, ಸೈಕಲ್ಲು ನೀರು ಹಾಗೂ ಮರಳು ಇದ್ದ ಜಾಗದಲ್ಲಿ ಹೇಗೆ ಚಲಿಸುತ್ತದೆ ಎಂಬಿತ್ಯಾದಿ ಅಂಶಗಳನ್ನು ಮಕ್ಕಳು ಕಲಿಯುತ್ತ ಹೋಗುತ್ತಾರೆ.

ಅವರು ಈಜುವುದನ್ನು ಕಲಿತಾಗ ಭಯವನ್ನು ಗೆಲ್ಲುತ್ತಾರೆ ಮತ್ತು ಈಜಿನಲ್ಲಿ ಸುಖವನ್ನು ಕಾಣುತ್ತಾರೆ. ಇದು ಅವರಿಗೆ ಈಜಿನ ವೇಗ, ದೇಹದ ಚಲನೆ ಮತ್ತು ಶ್ವಾಸಕೋಶದ ಶಕ್ತಿಯ ಬಗ್ಗೆ ಅರಿವನ್ನು ನೀಡುತ್ತದೆ. ನಾನು ಏಕೆ ಈ ಆಟಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆಂದರೆ, ತರಗತಿಯ ಹೊರಗೆ ಮತ್ತು ಒಳಗೆ ಆಡುವ ಆಟಗಳನ್ನು ನಾವು ಎಚ್ಚರಿಕೆಯಿಂದ ಗಮನಿಸಿದರೆ ಮಗುವು ಯಾವುದೇ ಒತ್ತಡವಿಲ್ಲದೆ ಖುಷಿಯಿಂದ ಕಲಿಯುವುದನ್ನು ಕಾಣಬಹುದು. ಮಕ್ಕಳಿಗೆ ಒಪ್ಪಿಗೆಯಾದಂತೆ, ಅವರದೇ ನಿಯಮಗಳಿಗೆ ತಕ್ಕಂತೆ ಮತ್ತು ಅವರುಗಳ ನಡುವೆ ಮಾತ್ರ ಹೋಲಿಕೆ ಮಾಡುವಂತೆ ಆಟಗಳನ್ನು ರೂಪಿಸಿದರೆ ಅವರು ಕಲಿಕೆಯನ್ನು ನಿಜಕ್ಕೂ ಆನಂದಿಸುತ್ತಾರೆ.



ಶೆಹನಾಝ್ ಡಿಕೆ ಅವರು ಕಳೆದ 28 ವರ್ಷಗಳಿಂದ ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಬೋಧನೆಯನ್ನು ಮಾಡುತ್ತಿದ್ದಾರೆ. ಬೋಧನಾ-ಕಲಿಕೆ ಪ್ರಕ್ರಿಯೆಯನ್ನು ಖುಷಿಯಿಂದ ಅನುಭವಿಸುವ ಹಾಗೆ ಮಾರ್ಪಡಿಸಲು ಕಲಿಕೆಯಲ್ಲಿರುವ ಸವಾಲುಗಳನ್ನು ನಿರಂತರವಾಗಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದರ ಕಡೆಗೆ ಅವರು ಹೆಚ್ಚಿನ ಗಮನವನ್ನು ನೀಡುತ್ತಿದ್ದಾರೆ. ಅವರನ್ನು shehnazakir@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**